SEPTEMBER 22, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಶಾಂತಿ, ಸಹಬಾಳ್ವೆ ಮತ್ತು ಸಹೋದರತ್ವದ** ಮಾರ್ಗ ತೋರಿದ, ಗುರು ನಾನಕ ದೇವ್ ಅವರ ಪುಣ್ಯತಿಥಿ ಅಂಗವಾಗಿ, ಹಲವು ಗುರುದ್ವಾರಾಗಳಲ್ಲಿ ಇಂದು, ಪುಣ್ಯ ಸ್ಮರಣೆ, ಗುರು ಗ್ರಂಥಸಾಹೇಬ್ ಪಠಣ, ಉಚಿತ ಪ್ರಸಾದ ವಿತರಣೆಯ, ಲಂಗರ್ ಆಯೋಜಿತವಾಗಿವೆ.

<><><>

**‘ಸೇವಾ ಸಂಕಲ್ಪ ಮಾಸಿಕ ಅಭಿಯಾನ’** ದೇಶಾದ್ಯಂತ ಜರುಗುತ್ತಿದೆ. ವ್ಯಾಪಾರ ವಹಿವಾಟು ಸುಗಮಗೊಳಿಸುವ, ‘ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್’ ಬಗ್ಗೆ, ಕೇಂದ್ರ ಸರ್ಕಾರ ಒತ್ತು ನೀಡುತ್ತಿದೆ. ಉದ್ಯಮಗಳಿಗೆ, ಪರವಾನಗಿ, ಅನುಮೋದನೆ ಮತ್ತು ಸರ್ಕಾರಿ ಸೇವೆಗಳನ್ನು, ಆನ್ಲೈನ್ ಮೂಲಕ ಒದಗಿಸಿ, ಸಮಯ, ಶ್ರಮ, ವೆಚ್ಚ ಮತ್ತು ಅನಗತ್ಯ ಕಾಗದಪತ್ರಗಳ ವಿಲೇ ಕಡಿತಗೊಳಿಸುವ ಮಹತ್ವಾಕಾಂಕ್ಷೆ, ಈ ಯೋಜನೆಯ ಹೊಂದಿದೆ.

<><><>

**ಧಾರವಾಡದ,** ಚಾರ್ಟರ್ಡ್ ಅಕೌಂಟೆಂಟ್ ವೀಣಾ ಮುದಿಗೌಡರ, 300 ಕಕ್ಷಿದಾರರಿಗೆ ಜಿ.ಎಸ್.ಟಿ. ಮತ್ತು ಇ–ಫೈಲಿಂಗ್ ಬಗ್ಗೆ, ಸಕಾಲಿಕ ಮಾರ್ಗದರ್ಶನ ಮಾಡುತ್ತಿದ್ದು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

**ವೀಣಾ ಮುದಿಗೌಡರ ಧ್ವನಿ 40 ಸೆಕೆಂದುಗಳು**

<><><>

**ಬೆಳಗಾವಿ ಜಿಲ್ಲೆ, ಸವದತ್ತಿ ತಾಲೂಕು,** ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ, ಪ್ರಭಾವತಿ ನೇತೃತ್ವದಲ್ಲಿ, ಹಿರಿಯ ಅಧಿಕಾರಿಗಳ ತಂಡ, ಮಳಿಗೆಗಳನ್ನು ಪರಿಶೀಲಿಸಿತು, ಹಲವು ಮಾರಾಟ ಮಳಿಗೆಯಲ್ಲಿ, ಅವಧಿ ಮೀರಿದ ಹಾಗೂ ಕಲುಷಿತ ಆಹಾರ ಮಾರಾಟ ಮಾಡುತ್ತಿರುವ ಪ್ರಕರಣಗಳನ್ನು, ತಂಡ ಪತ್ತೆ ಹಚ್ಚಿದೆ. ನಿಯಮ ಉಲ್ಲಂಘಿಸಿರುವ 9 ವ್ಯಾಪಾರಸ್ಥರ ವಿರುದ್ಧ, ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ, ಜಿಲ್ಲಾಧಿಕಾರಿ ಮೊಹಮ್ಮದ ರೋ   ’ನ್ ಆದೇಶಿಸಿದ್ದಾರೆ.

<><><>

**ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ,** ಈ ತಿಂಗಳ 25 ಹಾಗೂ 26ನೇ ತಾರೀಖು, ಡಾಕ್ಟರ್ ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ, ಕರ್ನಾಟಕ ರಾಜ್ಯ ಗ್ರಂಥಪಾಲಕರ 2ನೇ ಸಮ್ಮೇಳನ ಜರುಗಲಿದೆ ಎಂದು, ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ

ಹಲಗತ್ತಿ, ತಿಳಿಸಿದ್ದಾರೆ. 300ಕ್ಕೂ ಹೆಚ್ಚು ಪ್ರತಿನಿಧಿಗಳು, ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದು, ಪ್ರೊಫೆಸರ್ ಎಸ್.ಎಲ್. ಸಂಗಮ, ಸಮ್ಮೇಳನದ ನಿರ್ದೇಶಕರಾಗಿದ್ದಾರೆ, ಎಂದರು.

<><><>

**ತಮ್ಮ ನ್ಯಾಯಸಮ್ಮತ ಬೇಡಿಕೆಗಳನ್ನು** ಈಡೇರಿಸುವಂತೆ ಒತ್ತಾಯಿಸಿ, ಆಯುಷ್ ಫೆಡರೇಷನ್ ಆಫ್ ಇಂಡಿಯಾ ವತಿಯಿಂದ, ರಾಜ್ಯದ ಆಯುಷ್ ವೈದ್ಯರು, ಇಂದಿನಿಂದ ಅನಿರ್ದಿಷ್ಟಾವಧಿ ಧರಣಿ ಹಾಗೂ ಮುಷ್ಕರ ಆರಂಭಿಸಲಿದ್ದಾರೆ ಎಂದು, ರಾಜ್ಯ ಪದಾಧಿಕಾರಿ, ಡಾಕ್ಟರ್ ಎಂ.ಎಸ್. ಅಮಿತ, ಧಾರವಾಡದಲ್ಲಿ ತಿಳಿಸಿದ್ದಾರೆ.

<><><>

**5ನೇ ಆವೃತ್ತಿಯ, 'ಸ್ವಚ್ಛ ಸಾಗರ-ಸುರಕ್ಷಿತ ಸಾಗರ'** ರಾಷ್ಟ್ರೀಯ ಅಭಿಯಾನದ ಅಂಗವಾಗಿ, ಅಂತಾರಾಷ್ಟ್ರೀಯ ಕರಾವಳಿ ಸ್ವಚ್ಛತಾ ದಿನ – 2026 ರ ಜನಾಂದೋಲನದ ಭಾಗವಾಗಿ, ಮಂಗಳೂರಿನ, ತಣ್ಣೀರುಬಾವಿ ಕಡಲತೀರದಲ್ಲಿ, ಸ್ವಚ್ಛತಾ ಜನಾಂದೋಲನ ಜರುಗಿತು. ನವ ಮಂಗಳೂರು ಬಂದರು ಪ್ರಾಧಿಕಾರದ, ಹಿರಿಯ ಅಭಿಯಂತರ ಬಿ. ಅವಿನಾಶ ಚಾಲನೆ ನೀಡಿ, ಮಾತನಾಡಿ, ಸ್ವಚ್ಛತೆ ಅವಿಭಾಜ್ಯ ಅಂಗವಾಗಬೇಕು. ಕಡಲ ತೀರ ಪರಿಸರದ ಸ್ವಚ್ಛತೆ ನಮ್ಮ ಆದ್ಯತೆ ಎಂದರು.

<><><>

**ಕಲಬುರಗಿ ಜಿಲ್ಲೆಯ, 11 ತಾಲೂಕುಗಳು ಹಾಗೂ** 260 ಗ್ರಾಮ ಪಂಚಾಯಿತಿಗಳ, ಒಟ್ಟು 4 ಸಾವಿರದ 431 ಸದಸ್ಯ ಸ್ಥಾನಗಳ, ಮೀಸಲಾತಿ ನಿಗದಿಪಡಿಸಿ, ರಾಜ್ಯ ಪರಿಪತ್ರದಲ್ಲಿ ಪ್ರಕಟಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಇಕ್ರಂ ಶರೀಫ ತಿಳಿಸಿದ್ದಾರೆ.

<><><>

**ವಸತಿ ಖಾತೆ ಸಚಿವ, ಝಮೀರ್ ಅಹಮದ್ ಖಾನ್**, ಇಂದು ಮಧ್ಯಾಹ್ನ 1.30ಕ್ಕೆ, ಚಿತ್ರದುರ್ಗ ಜಿಲ್ಲೆ, ಹಿರಿಯೂರಿಗೆ ಭೇಟಿ ನೀಡಿ, ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಲಿದ್ದಾರೆ. ಕಾಂಗ್ರೆಸ್ ಪಕ್ಷದ ಕಚೇರಿಗೂ, ಭೇಟಿ ನೀಡಲಿದ್ದಾರೆ.

<><><>

**ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿ ಶ್ರೀ ಶಾರದಾಂಬಾ** ಮಠದಲ್ಲಿ, ಅಕ್ಟೋಬರ್ 10 ರಿಂದ 26ರ ವರೆಗೆ, ಶರವನ್ನರಾತ್ರಿ ಹಾಗೂ ದಸರಾ ಮಹೋತ್ಸವ ಜರುಗಲಿದೆ.

<><><>

**ಗದಗ ಜಿಲ್ಲೆಯಲ್ಲಿ,** ಕಾನೂನು ಸೇವಾ ಸ್ವಯಂಸೇವಕರಿಗಾಗಿ ಪುನಃಶ್ಚೇತನ ತರಬೇತಿ ಕಾರ್ಯಾಗಾರ ಜರುಗಿತು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ, ಹಾಗೂ ನ್ಯಾಯಾಧೀಶರಾದ ನಾಗವೇಣಿ ಚಾಲನೆ ನೀಡಿದರು.

<><><>

**ನಾಡಹಬ್ಬ ಮೈಸೂರು ದಸರಾ ಮಹೋತ್ಸವದ,** ಜಂಬೂ ಸವಾರಿ, ಪಂಜಿನ ಕವಾಯತು ಹಾಗೂ ಡ್ರೋನ್ ಶೋ ವೀಕ್ಷಿಸಲು, ವಿಶೇ ' ಟಿಕೆಟ್ ವ್ಯವಸ್ಥೆ ಜಿಲ್ಲಾಡಳಿತ ಕೈಗೊಂಡಿದೆ. ಆಸಕ್ತರು, ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್‌ಗಳನ್ನು ಆನ್‌ಲೈನ್‌ನಲ್ಲಿ, ಪಡೆಯಬಹುದು.ಜಾಲತಾಣ www.mysoredasara.gov.inಗೆ ಭೇಟಿ ನೀಡಿ, ಬುಕ್ಕಿಂಗ್ ಮಾಡಬಹುದು.

<><><>

**ಬೆಂಗಳೂರು ಗ್ರಾಮಾಂತರ ಜಿಲ್ಲೆ,** ದೊಡ್ಡಬಳ್ಳಾಪುರ ತಾಲೂಕಿನ ಆರು ನ್ಯಾಯಾಲಯಗಳಲ್ಲಿ, ಇತ್ತೀಚೆಗೆ ನಡೆದ, 9ನೇ ರಾಷ್ಟ್ರೀಯ ಜನತಾ ನ್ಯಾಯಾಲಯದಲ್ಲಿ, ಒಟ್ಟು 222 ಪ್ರಕರಣಗಳನ್ನು, ಕಕ್ಷಿದಾರರ ಸಮಕ್ಷಮ, ಪರಸ್ಪರ ರಾಜೀಸಂಧಾನದ ಮೂಲಕ, ಇತ್ಯರ್ಥ ಪಡಿಸಲಾಗಿದೆ ಎಂದು, ನ್ಯಾಯಾಧೀಶ ದಾಸರಿ ಕ್ರಾಂತಿ ಕಿರಣ ತಿಳಿಸಿದ್ದಾರೆ.

<><><>

**ಗದಗ ಸಾರಿಗೆ ನಗರದ ಶ್ರೀ ಈಶ್ವರ** ದೇವಸ್ಥಾನದಲ್ಲಿ, ರಕ್ತದಾನ ಶಿಬಿರ ಹಾಗೂ ಆರೋಗ್ಯ ತಪಾಸಣೆಗೆ, ಗದಗ ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಡಾಕ್ಟರ್ ರಾಜೇಂದ್ರ ಗಡಾದ ಚಾಲನೆ ನೀಡಿದರು.

<><><>

**ಬಾಗಲಕೋಟೆ ಜಿಲ್ಲೆ, ಜಮಖಂಡಿ ತಾಲೂಕು,** ಕೊಣ್ಣೂರು ಗ್ರಾಮದ ಶೈಕ್ಷಣಿಕ ಅಭಿವೃದ್ಧಿಗೆ ಸಂಬಂಧಿಸಿ, ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಜಿಲ್ಲಾ ಪಂಚಾಯಿತಿ ಸಿ.ಇ.ಓ. ಗಜಾನನ ಬಾಲೆ ನೇತೃತ್ವದಲ್ಲಿ, ತಾಲೂಕು ಆಡಳಿತದ ಅಧಿಕಾರಿಗಳ ಸಭೆ ನಡೆಯಿತು.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**